## ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577002.**

ಸಂಖ್ಯೆ/ದಾವಿವಿ/ಮಾಸನಿ/ಹೈಕ-459/2017-18/2874B ದಿನಾಂಕ: 20-07-2017

# ನೇಮಕಾತಿ ಅಧಿಸೂಚನೆ

ವಿಷಯ:- ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಬೋಧಕೇತರ ಹುದ್ದೆಗಳನ್ನು ತುಂಬಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ:-
1. ಸರ್ಕಾರಿ ಆದೇಶ ಸಂಖ್ಯೆ ಇಡಿ14 ಯುಎನ್‌ಇ 2015 ಬೆಂಗಳೂರು, ದಿನಾಂಕ: 16-09-2016
2. ಸರ್ಕಾರಿ ಆದೇಶ ಸಂಖ್ಯೆ ಇಡಿ100 ಯುಎನ್‌ಇ 2016 ಬೆಂಗಳೂರು, ದಿನಾಂಕ: 16-09-2016
3. ಸರ್ಕಾರಿ ಆದೇಶ ಸಂಖ್ಯೆ ಇಡಿ589 ಯುಎನ್‌ಇ 2015 ಬೆಂಗಳೂರು, ದಿನಾಂಕ: 19-11-2016
4. ಸರ್ಕಾರದ ಪತ್ರ ಸಂಖ್ಯೆ: ಇಡಿ 14 ಯುಎನ್‌ಇ 2015, ದಿನಾಂಕ: 19-11-2016
5. ಸರ್ಕಾರದ ಪತ್ರ ಸಂಖ್ಯೆ: ಇಡಿ 496 ಯುಎನ್‌ಇ 2016, ದಿನಾಂಕ: 08-12-2016
6. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 08 ಸೆಹಿಮ 95, ದಿನಾಂಕ: 20-06-1995
7. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 53 ಸೆನೆನಿ 2007, ದಿನಾಂಕ: 04-01-2008
8. ಸರ್ಕಾರದ ಪತ್ರ ಸಂಖ್ಯೆ: ಇಡಿ 14 ಯುಎನ್‌ಇ 2015, ದಿನಾಂಕ: 19-11-2016.
9. ಸರ್ಕಾರದ ಪತ್ರ ಸಂಖ್ಯೆ: ಇಡಿ 496 ಯುಎನ್‌ಇ 2016, ದಿನಾಂಕ: 08-12-2016.
10. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಅನುಮೋದನೆ ಪತ್ರ ಸಂಖ್ಯೆ: ಸಕನಿ/ಮೀ.ಜಾ.ಕೋ/ಸಿಆರ್- 2016-17, ದಿನಾಂಕ: 10-01-2017.
11. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅನುಮೋದನೆ ಪತ್ರ ಸಂಖ್ಯೆ: ಹಿಂವಕನಿ/ಮಾಶಾ/ಸಿಆರ್-8/2016-17, ದಿನಾಂಕ: 17-01-2017.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರ ಅನುಮೋದನೆ ಪತ್ರ ಸಂಖ್ಯೆ: ಇಡಿ 36 ಯುಎನ್‌ಇ 2017, ದಿನಾಂಕ: 24-01-2017.
13. ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪತ್ರ ಸಂಖ್ಯೆ: GS 02 DUM 2017 ದಿನಾಂಕ: 01-03-2017.
14. ಸಿಂಡಿಕೇಟ್ ಅನುಮೋದನೆ ಸಂಖ್ಯೆ: 01, ದಿನಾಂಕ: 02-03-2017.
15. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 02-03-2017.
16. Govt. Circular No. ED 136 UNE 2017, Dated: 17-7-2017.
17. Syndicate Res., No: 01, Dated: 20-07-2017
18. Vice-Chancellor's orders dated: 20-7-2017.

---000---

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಬೋಧಕೇತರ ಹುದ್ದೆಗಳನ್ನು ಉಲ್ಲೇಖದಲ್ಲಿನ ಸರ್ಕಾರಿ ಆದೇಶದಲ್ಲಿ ಸೃಜಿಸಲು ಅನುಮೋದನೆ ನೀಡಲಾಗಿರುತ್ತದೆ. ಉಲ್ಲೇಖ 2 ಹಾಗೂ 3ರಲ್ಲಿನ ಅಧಿಸೂಚನೆ/ತಿದ್ದುಪಡಿ ಅಧಿಸೂಚನೆಯಲ್ಲಿ ವಿವಿಧ ಹುದ್ದೆಗಳನ್ನು ಗುರುತಿಸಿ ನಿಗದಿಪಡಿಸಿ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಲಾಗಿರುತ್ತದೆ. ಅನುಚ್ಛೇಧ 371 (ಜೆ) ನಂತೆ ಹೊರಡಿಸಲಾದ ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 13ರಂತೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳಿಂದ ಅರ್ಜಿ ಪಡೆದು ಆಯ್ಕೆಗೆ ಅನುಸಾರ ತತ್ಸಂಬಂಧ ವೃಂದಗಳಲ್ಲಿ ಹಂಚಿಕೆ ತರುವಾಯ ಲಭ್ಯವಿರುವ ವಿವಿಧ ವೃಂದದವರಿಂದ ಸ್ಥಳೀಯ ವೃಂದದ ಈ ಕೆಳಕಂಡ ಹುದ್ದೆಗಳನ್ನು ತುಂಬಲು ಅರ್ಹ ಪ್ರವರ್ಗದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ವಿವರ

| ಕ್ರ.ಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಪ್ರವರ್ಗವಾರು ಅರ್ಹತೆ |
|---|---|---|---|---|---|
| **ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ** | | | | | |
| 01 | ಸಹಾಯಕ ಕುಲಸಚಿವ | 28,100-50,100 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಸ್ನಾತಕೋತ್ತರ (PG) ಪದವಿ ಪಡೆದಿರಬೇಕು. | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |
| 02 | ಕಛೇರಿ ಅಧೀಕ್ಷಕ | 22,800-43,200 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಸ್ನಾತಕ (UG) ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>ಪ್ರಾಥಮಿಕ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |
| 03 | ಪ್ರಥಮ ದರ್ಜೆ ಸಹಾಯಕ | 16,000-29,600 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಸ್ನಾತಕ (UG) ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>ಪ್ರಾಥಮಿಕ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |
| 04 | ಸಹಾಯಕ ಗ್ರಂಥಪಾಲಕ | 15,600-39,100 + AGP6,000 (UGC Scale) | 1. ಗ್ರಂಥಾಲಯ, ಮಾಹಿತಿ ವಿಜ್ಞಾನ ದಾಖಲಾತಿ ವಿಜ್ಞಾನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು ಶೇ. 55 ಅಂಕಗಳನ್ನು ಗಳಿಸಿರಬೇಕು. ಶ್ರೇಣಿ ಕ್ರಮವನ್ನು ಅನುಸರಿಸುತ್ತಿರುವ ಕಡೆಗಳಲ್ಲಿ ತತ್ಸಮಾನ ಶ್ರೇಣಿಯನ್ನು ಹೊಂದಿರಬೇಕು.<br>2. ಸಂಬಂಧಿಸಿದ ವಿಷಯದಲ್ಲಿ ಅಥವಾ ಪೂರಕ ವಿಷಯಗಳಲ್ಲಿ ಪಿ.ಹೆಚ್.ಡಿ ಪದವಿಯನ್ನು ಹೊಂದಿರುವುದರ ಜೊತೆಗೆ ಉತ್ತಮ ಶೈಕ್ಷಣಿಕ ಸಾಧನೆಯನ್ನು ಮಾಡಿರಬೇಕು.<br>3. ಗ್ರಂಥಾಲಯದಲ್ಲಿ ಸೃಜನಾತ್ಮಕ ಸೇವೆಗಳನ್ನು ಒದಗಿಸಿದ ಬಗ್ಗೆ, ವ್ಯವಸ್ಥಿತ ನಿರ್ವಹಣೆ ಮಾಡಿದ ಬಗ್ಗೆ ಹಾಗೂ ಗ್ರಂಥಾಲಯದ ಗಣಕೀಕರಣವನ್ನು ಮಾಡಿಸಿದ ಬಗ್ಗೆ ಆಧಾರಗಳನ್ನು ಒದಗಿಸಬೇಕು.<br>4. ಯುಜಿಸಿ ನಿರ್ದಿಷ್ಟಪಡಿಸಿದ NET/SLET ಪಾಸಾಗಿರಬೇಕು ಹಾಗೂ ಎಪಿಐ ಆಧಾರಿತ ಪಿಬಿಎಎಸ್ ನಲ್ಲಿ ಕನಿಷ್ಠ ಅಂಕಗಳನ್ನು ಪಡೆದಿಬೇಕಾದ್ದು ಕಡ್ಡಾಯ. | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |

| | | | | | |
|---|---|---|---|---|---|
| 05 | ಗ್ರಂಥಾಲಯ ಸಹಾಯಕ | 14,550–26,700 | 1. ಅಂಗೀಕೃತ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ಮಾಹಿತಿ ಮತ್ತು ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ (PG) ಪದವಿ ಪಡೆದಿರಬೇಕು.<br>2. ಗ್ರಂಥಾಲಯದ ಗಣಕೀಕರಣ ಮಾಡಿಸಿದ ಬಗ್ಗೆ ಗ್ರಂಥಾಲಯದ ಸೇವೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿದ ಬಗ್ಗೆ ಆಧಾರಗಳನ್ನು ಒದಗಿಸಬೇಕು.<br>3. ಗ್ರಂಥಾಲಯದಲ್ಲಿ ಕನಿಷ್ಠ 03 ವರ್ಷ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |
| 06 | ಹೆಲ್ಪರ್ | 9,600–14,530 | 7ನೇ ತರಗತಿ ಅಥವಾ ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ತತ್ಸಮಾನ ಪರೀಕ್ಷೆ | 01 | ಮೀಸಲಾತಿ ಇರುವುದಿಲ್ಲ ಮೆರಿಟ್ ಆಧಾರದಲ್ಲಿ ತುಂಬಲಾಗುವುದು. |

1. ಸಹಾಯಕ ಕುಲಸಚಿವ/ನಿಬಂಧಕ:

ವಿದ್ಯಾರ್ಹತೆ:

Post-Graduate degree in any discipline of a recognized University. with at least 55% marks. <u>Desirable:</u> Administrative experience not less than 5 years in a Government /Autonomous/Higher Education institutions.

2. ಅಧೀಕ್ಷಕ:

ವಿದ್ಯಾರ್ಹತೆ:

Must have passed a Degree Examination in any discipline of a recognized University with at least II Class. <u>Desirable:</u> Administrative Experience of not less than 4 years in a Government /Autonomous/Higher Education institutions.

## <u>ವಯೋಮಿತಿ</u>

ಅಭ್ಯರ್ಥಿಯು ಕನಿಷ್ಠ 18 ವರ್ಷಗಳನ್ನು ಪೂರೈಸಿರಬೇಕು ಹಾಗೂ ಅಭ್ಯರ್ಥಿಯ ಗರಿಷ್ಠ ವಯೋಮಿತಿಯು.

(ಎ) ಪ.ಜಾತಿ, ಪ.ಪಂ ಹಾಗೂ ಪ್ರವರ್ಗ–1, ಹಾಗೂ ಅಭ್ಯರ್ಥಿಗಳಿಗೆ 40ವರ್ಷಗಳು.

(ಬಿ) ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ 38 ವರ್ಷಗಳು.

(ಸಿ) ಇತರೆ ಸಾಮಾನ್ಯ ಅಭ್ಯರ್ಥಿಗಳು 35 ವರ್ಷಗಳನ್ನು ವಯೋಮಿತಿಯನ್ನು ಮೀರಿರಬಾರದು.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:55. ಸೆ.ನೆ.ನಿ.2008, ದಿನಾಂಕ: 15–01–2009, ರನ್ವಯ ನಿಗದಿಪಡಿಸಲಾಗಿದೆ.

**ಅಭ್ಯರ್ಥಿಗಳಿಗೆ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳು:**

- **ಈಗಾಗಲೇ ಅರ್ಜಿಸಲ್ಲಿಸಿದ ಅಭ್ಯಥಿಗಳು ಮತ್ತೆ ಅರ್ಜಿ ಸಲ್ಲಿಸಬೇಕಾಗಿಲ್ಲ. ಆದಾಗ್ಯೂ ಅಭ್ಯರ್ಥಿಗಳು ಏನಾದರೂ ಹೆಚ್ಚಿನ ವಿವರ ಸಲ್ಲಿಸುವುದಿದ್ದಲ್ಲಿ 8 ಪ್ರತಿಗಳಲ್ಲಿ ಈ ಕೆಳಗೆ ಸಹಿ ಮಾಡಿದವರಿಗೆ ಕಳುಹಿಸಿಕೊಡಬೇಕು.**
- ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ- 577002 ಇವರಿಂದ ಬೋಧಕೇತರ ಹುದ್ದೆಗಳ ಅರ್ಜಿ ಶುಲ್ಕ ರೂ. 500/- (ಮರುಪಾವತಿಸಲಾಗದ) ಗಳನ್ನು ಪಾವತಿಸಿ ಅರ್ಜಿಯನ್ನು ಪಡೆದುಕೊಳ್ಳುವುದು. ಎಸ್.ಸಿ/ಎಸ್.ಟಿ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಶೇ. 50%ರ ವಿನಾಯಿತಿ ಇರುತ್ತದೆ. ಅಲ್ಲದೇ ಅಂಗವಿಕಲ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಪೂರ್ಣ ವಿನಾಯಿತಿ ಇರುತ್ತದೆ. ನಿಗದಿತ ಶುಲ್ಕವನ್ನು ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ಸಂದಾಯವಾಗುವಂತೆ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟನ್ನು ಸಲ್ಲಿಸುವುದರ ಮೂಲಕ ಅಥವಾ ದಾವಣಗೆರೆ ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಚಲನ್ ಮೂಲಕ ಶುಲ್ಕವನ್ನು ತುಂಬುವುದು ಹಾಗೂ ಅದರ ಮೇಲೆ -------------------- ಹುದ್ದೆಗಾಗಿ ಅರ್ಜಿ ಶುಲ್ಕವೆಂದು ನಮೂದಿಸಿವುದು.

**ಸೂಚನೆ:** ಪೋಸ್ಟಲ್ ಆರ್ಡರ್‌ಗಳು, ಮನಿ ಆರ್ಡರ್‌ಗಳು ಹಾಗೂ ಬ್ಯಾಂಕ್ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

- **ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) 2013ರನ್ವಯ ನೇಮಕಾತಿಯಲ್ಲಿ ಸ್ಥಳೀಯ ಅಭ್ಯರ್ಥಿಯೆಂದು ಮೀಸಲಾತಿಯನ್ನು ಕ್ಲೇಮು ಮಾಡುವ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ನೀಡುವ ನಿಗದಿತ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು.**
- ಭಾರತ ಸರ್ಕಾರದ ಆದೇಶ ಸಂಖ್ಯೆ:ಬಿಸಿ-16014/1/82ಬಿಸಿಡಿ-1, ದಿನಾಂಕ: 6-10-1984ರಲ್ಲಿ ತಿಳಿಸಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ಭರ್ತಿ ಮಾಡಲಾಗುವುದು.
- ಭರ್ತಿಮಾಡಿದ ಅರ್ಜಿಯೊಂದಿಗೆ 12"X6" ಅಳತೆಯ ಸ್ವ-ವಿಳಾಸವುಳ್ಳ ಒಂದು ಲಕೋಟೆಯನ್ನು ಇಡುವುದು.
- ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಆದ www.davangereuniversity.ac.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸುವುದು.

- ಭರ್ತಿಮಾಡಿದ ಅರ್ಜಿಯನ್ನು ದಿನಾಂಕ: 14-08-2017ರ ಸಂಜೆ 5-00ಗಂಟೆಯ ಒಳಗಾಗಿ **ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-** 577002 ಇವರಿಗೆ ತಲುಪಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ಅರ್ಜಿಯೊಂದಿಗೆ ದೃಢೀಕರಿಸಿ ಲಗತ್ತಿಸಿದ ಶೈಕ್ಷಣಿಕ ಪ್ರಮಾಣ ಪತ್ರಗಳು, ಬಯೋಡಾಟಾ, ಜಾತಿ ಪ್ರಮಾಣ ಪತ್ರ, ಅಂಕಪಟ್ಟಿಗಳು ಹಾಗೂ ಅವುಗಳನ್ನು ಹಿಂದಿರುಗಿಸಲಾಗುವುದಿಲ್ಲ.
- ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದ ಮುಖಾಂತರ ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾಲಯಕ್ಕೆ ತಲುಪುವಂತೆ ಸಲ್ಲಿಸುವುದು.
- ತಡವಾಗಿ ತಲುಪಿದ ಅಪೂರ್ಣ ಹಾಗೂ ಎಂಟು ಸೆಟ್‌ಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಲಾಗುವುದು. ಹಾಗೂ ಈ ಬಗೆಗೆ ಅಭ್ಯರ್ಥಿಗೆ ಯಾವುದೇ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
- ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
- ಸಂದರ್ಶನಕ್ಕೆ ಹಾಜರಾಗುವ ಅಥವಾ ನೇಮಕಾತಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ದಿನಭತ್ಯೆ/ಪ್ರಯಾಣ ಭತ್ಯೆಯನ್ನು ವಿಶ್ವವಿದ್ಯಾನಿಲಯವು ಭರಿಸುವುದಿಲ್ಲ.
- ಆಯ್ಕೆಯಾದ ಅಭ್ಯರ್ಥಿಗಳು ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ, ದಾವಣಗೆರೆ ಚಿತ್ರದುರ್ಗ ಜಿಲ್ಲೆಯ ಸ್ನಾತಕೋತ್ತರ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ಇಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.
- ಆಯ್ಕೆಯಾದ ಅಭ್ಯರ್ಥಿಗಳಿಗೆ ಸೇವಾ ಪೂರ್ವ ಪರೀಕ್ಷಾವಧಿಯು ಎರಡು ವರ್ಷಗಳಾಗಿರುತ್ತದೆ. ವಿಶ್ವವಿದ್ಯಾಲಯವು ಬಯಸಿದ್ದಲ್ಲಿ ಅದನ್ನು ಮುಂದೂಡಬಹುದು.
- ವಿಶ್ವವಿದ್ಯಾಲಯವು ನೇಮಕಾತಿ ಅಧಿಸೂಚನೆಯಲ್ಲಿ ಕಾಣಿಸಲಾದ ಹುದ್ದೆಗಳನ್ನು ತುಂಬುವ ಅಥವಾ ತುಂಬದೇ ಇರುವ ಅಧಿಕಾರ ಹಕ್ಕನ್ನು ಕಾಯ್ದಿರಿಸಿರುತ್ತದೆ.
- ನಿಗದಿತ ಅರ್ಜಿ ನಮೂನೆಯೊಂದಿಗೆ ನೀಡಲಾದ ಬಯೋಡಾಟಾದ ನಮೂನೆಯನ್ನು ಜಾಗರೂಕತೆಯಿಂದ ಭರ್ತಿಮಾಡಿ ಅರ್ಜಿ ನಮೂನೆ 08 ಸೆಟ್‌ಗಳಿಗೆ ತಪ್ಪದಂತೆ ಲಗತ್ತಿಸಬೇಕು.
- ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಯ ಅಭ್ಯರ್ಥಿತನವನ್ನು ಅನರ್ಹಗೊಳಿಸಲಾಗುವುದು.

**<u>ಟಿಪ್ಪಣಿ:</u>**

- ಮೀಸಲಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ.08.ಸೆ.ಇ.ಮ.95, ದಿನಾಂಕ: 20-06-1995 ಮತ್ತು ಸಂಖ್ಯೆ:ಸಿಆಸುಇ2007, ದಿನಾಂಕ: 04-01-2008 ಪ್ರಕಾರ ನಿಗದಿಪಡಿಸಲಾಗಿದೆ.
- ಪ.ಜಾತಿ ಮತ್ತು ಪ.ಪಂಗಡದವರಿಗೆ ಮೀಸಲಾದ ರಿಕ್ತ ಹುದ್ದೆಗಳಿಗೆ ಇತರ ಪ್ರವರ್ಗ ಅಥವಾ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.
- ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳು ಇತರ ಪ್ರವರ್ಗ ಹಾಗೂ ಸಾಮಾನ್ಯ ವರ್ಗಗಳ ರಿಕ್ತ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
- ನೇಮಕಾತಿ ಪ್ರಕ್ರಿಯೆಯು ಮುಕ್ತ ಆಯ್ಕೆ ಪ್ರಕ್ರಿಯೆಯ ಪದ್ಧತಿಯನ್ನು ಒಳಗೊಂಡಿರುತ್ತದೆ.

- ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರಗಳನ್ನು ತಹಶಿಲ್ದಾರರು ಅಥವಾ ತತ್ಸಮಾನ ಸಕ್ಷಮ ಪ್ರಾಧಿಕಾರಕ್ಕೆ ಕಡಿಮೆ ಇಲ್ಲದ ಅಧಿಕಾರಿಗಳಿಂದ ಸದರಿ ನೇಮಕಾತಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಒಂದು ವರ್ಷದೊಳಗಿನ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರತಕ್ಕದ್ದು ಮತ್ತು ಆ ಪ್ರಮಾಣ ಪತ್ರಗಳು ಸರ್ಕಾರಿ ಆದೇಶ ಸಂಖ್ಯೆ:ಎಸ್.ಡಬ್ಲ್ಯೂಡಿ 40 ವಿಸಿಎ 90ದಿನಾಂಕ: 08-02-1999ರ ಆದೇಶದ ನಮೂನೆಯಲ್ಲಿ ಇರತಕ್ಕದ್ದು.
- ಆಯ್ಕೆಯಾದ ಅಭ್ಯರ್ಥಿಯ ನಿವೃತ್ತಿ ಸೌಲಭ್ಯಗಳು ನೂತನ ಪಿಂಚಣಿ ಯೋಜನೆಯ ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ (ವಿಶೇಷ) 04ಪಿ.ಇ.ಟಿ 2005. ಬೆಂಗಳೂರು. ದಿನಾಂಕ: 01-01-2006ರ ಅನ್ವಯ ಇರತಕ್ಕದ್ದು ಹಾಗೂ ರಾಜ್ಯ ಸರ್ಕಾರವು ಈ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಇರತಕ್ಕದ್ದು.

ಆದೇಶಾನುಸಾರ

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577 002.

ಪ್ರತಿಗಳು,

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
2 ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
3 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಹೈದ್ರಾಬಾದ್-ಕರ್ನಾಟಕ ಕೋಶ, ಬೆಂಗಳೂರು.
4 ಡೀನರು, ವಿದ್ಯಾರ್ಥಿಗಳ ಕಲ್ಯಾಣ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
5 ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
6 ಸಂಯೋಜನಾಧಿಕಾರಿಗಳು, ಪಿ.ಜಿ ಸೆಂಟರ್, ಜ್ಞಾನಗಂಗೋತ್ರಿ, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ ದಾವಿವಿ.
7 ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
8 ಪ್ರಾಂಶುಪಾಲರು, ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
9 ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

ಪ್ರತಿಗಳು,

1 ಕುಲಪತಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
2 ಕುಲಸಚಿವರು (ಆಡಳಿತ), ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
3 ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
4 ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಾಪಕರ ಸಂಘ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.